ಪಿ.ಡಬ್ಲ್ಯೂ.4.

**ಸಾಕ್ಷಿಯನ್ನು ದಿನಾಂಕ 29/11/2022 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಕೆ ವಕೀಲರಿಂದಃ–**

ಮೃತ ಶ್ರೀನಾಥ ನನ್ನ ತಮ್ಮ. ಆತ ಸಾಯುವುದಕ್ಕಿಂತ ಮೊದಲು ಯಾವಾಗಲೂ ನನ್ನ ಜೊತೆ ಇರುತ್ತಿದ್ದ. ದಿನಾಂಕ 28/09/2018 ರಂದು ನನ್ನ ತಮ್ಮ ಶ್ರೀನಾಥ ನಮ್ಮ ಮನೆಯಲ್ಲಿದ್ದ. ಸಾಯಕಾಲದವರೆಗೆ ಇದ್ದ. ರಾತ್ರಿ ಇರಲಿಲ್ಲ. ಆತ ಎಲ್ಲಿಗೆ ಹೋಗಿ ಬರುತ್ತಾನೆ ಎನ್ನುವ ವಿಚಾರ ನನಗೆ ಗೊತ್ತಿರಲಿಲ್ಲ. ನಾನು ಆ ರಾತ್ರಿ ಆತನನ್ನು ಹುಡುಕಲು ಪ್ರಯತ್ನಪಟ್ಟಿಲ್ಲ. ಬೆಳಗ್ಗೆ 7.30 ರಿಂದ 8.00 ಗಂಟೆ ಸಮಯದಲ್ಲಿ ನನ್ನ ತಮ್ಮನ ಹೆಣವನ್ನು ನೋಡಿದ್ದೇನೆ. ನಾವೆಲ್ಲರೂ ಮೊಟ್ಟ ಮೊದಲನೇ ಬಾರಿಗೆ ಆ ದಿವಸ 7.30 ರಿಂದ 8.00 ಗಂಟೆಗೆ ಆತನ ಹೆಣವನ್ನು ನೋಡಿದೆವು. ನಾವು ನೋಡಿದಾಗ ಹೆಣ ನೇತಾಡುತ್ತಾ ಇತ್ತು. ಹೆಣವನ್ನು ನೋಡಿದ ನಂತರ ನಾನು ವೈಯುಕ್ತಿಕವಾಗಿ ಪೊಲೀಸರಿಗೆ ದೂರು ಕೊಟ್ಟಿಲ್ಲ ನನ್ನ ತಂದೆಯವರು ಕೊಟ್ಟಿದ್ದಾರೆ. ಪೊಲೀಸರು ಬೆಳಗಿನ 9.30 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದರು. ಪೊಲೀಸರು ಬರುವ ಹೊತ್ತಿಗೆ ನಮ್ಮ ಗ್ರಾಮದ ಸಾಕಷ್ಟು ಜನ ಮತ್ತು ಸಂಬಂಧಿಕರು ಅಲ್ಲಿ ಸೇರಿದ್ದರು. ಪೊಲೀಸರು ಬಂದಾಗ ಮೊಟ್ಟ ಮೊದಲು ನೇತಾಡುತ್ತಿದ್ದ ಹೆಣವನ್ನು ಇಳಿಸಿದವರ ಹೆಸರು ಗೊತ್ತಿಲ್ಲ. ಹೆಣವನ್ನು ಕೆಳಕ್ಕೆ ಇಳಿಸಿದ ನಂತರ ಪೊಲೀಸರು ಆತನ ಜೇಬಿನಲ್ಲಿದ ಒಂದು ಮೊಬೈಲ್ ಫೋನು ಮತ್ತು ಆತನ ಶರ್ಟ್, ಪ್ಯಾಂಟ್ ಹಾಗೂ

ಹಗ್ಗ, ಚಪ್ಪಲಿ, ರಕ್ತ ಸೋರಿತ ಮಣ್ಣುಗಳನ್ನು ವಶಪಡಿಸಿಕೊಂಡರು. ವಶಪಡಿಸಿಕೊಂಡ ವಸ್ತುಗಳ ಮೇಲೆ ನನ್ನ ಸಹಿಗಳನ್ನು ಮಾಡಿಸಿಕೊಂಡಿರುವುದಿಲ್ಲ. ವಶಪಡಿಸಿಕೊಂಡ ವಸ್ತುಗಳ ಮೇಲೆ ಸೀಲನ್ನು ಹಾಕಿದರೋ, ಇಲ್ಲವೋ ನಾನು ಗಮನಿಸಲಿಲ್ಲ. ಸೀಲನ್ನು ಪೊಲೀಸರು ಯಾರ ವಶಕ್ಕೆ ಕೊಟ್ಟರು ಎಂದು ಹೇಳಲಾಗುವುದಿಲ್ಲ. ವಶಪಡಿಸಿಕೊಂಡ ವಸ್ತುಗಳ ಮೇಲೆ ಸದರಿ ತಾರೀಖನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಿಂದ ಶವವನ್ನು ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು ಅಲ್ಲಿಂದ ಕೋಲಾರದ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಹೆಣವನ್ನು ಕಂಡ ಜಾಗದಿಂದ ಆಸ್ಪತ್ರೆಗೆ ಸಾಗಿಸುವ ಮಧ್ಯದಲ್ಲಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ನನ್ನ ಹೇಳಿಕೆಯನ್ನು ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದೇನೆ. ಪುನಃ ಬೇರೆ ಕಡೆಗಳಲ್ಲಿ ನನ್ನ ಹೇಳಿಕೆಗಳನ್ನು ಕೊಟ್ಟಿಲ್ಲ. ದಿನಾಂಕ 18/09/2018 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಮನೆ ಹತ್ತಿರ ಬಂದು ನನ್ನ ತಮ್ಮನನ್ನು ಬೈದ ಸಮಯದಲ್ಲಿ ನಾನು ಮನೆಯ ಹತ್ತಿರ ಇರಲಿಲ್ಲ. ದಿನಾಂಕ 26/09/2018 ರಂದು ಸಂಜೆ 5.30 ಗಂಟೆ ಸುಮಾರಿಗೆ ಆರೋಪಿತರು ನಮ್ಮ ಮನೆ ಹತ್ತಿರ ಬಂದು ಜಾತಿ ನಿಂದನೆ ಮಾಡಿ ಬೈದರು ಎನ್ನುವ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಐದೂ ಜನಗಳಲ್ಲಿ ಯಾರ್ಯಾರು ಜಾತಿ ನಿಂದನೆ ಮಾತುಗಳು ಆಡಿದರು ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ಜೀವನದಲ್ಲಿ ಜಿಗುಪ್ಸೆ ಹೊಂದಿ ಮರಕ್ಕೆ ನೇಣು ಹಾಕಿಕೊಂಡು ಸ್ವತಃ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಸರಿಂದಲ್ಲ. ಆತನ ಸಾವಿಗೆ ಆರೋಪಿತರು ಕಾರಣರಲ್ಲ ಎಂದರೆ ಸರಿಯಲ್ಲ. ಅಖಿಲಾ ರವರನ್ನು ನನ್ನ ತಮ್ಮ ಪ್ರೀತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಖಿಲಾ ಮತ್ತು ನನ್ನ ತಮ್ಮನ ಮಧ್ಯೆ ಯಾವುದೇ ಪ್ರೀತಿ ಪ್ರೇಮಗಳು ಇರಲಿಲ್ಲ ಎಂದರೆ ಸರಿಯಲ್ಲ ನಾವು ಸುಳ್ಳು ಕಥೆಯನ್ನು ಕಟ್ಟಿ ಸುಳ್ಳು ಹೇಳಿದ್ದೇವೆಂದರೆ ಸರಿಯಲ್ಲ. ಆರೋಪಿತರು ಯಾರೂ ನಾವು ಹೇಳಿದಂತೆ ಜಾತಿ ನಿಂದನೆ ಮಾತುಗಳಲ್ಲಿ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ನೇಣುಹಾಕಿಕೊಂಡು ಸತ್ತಿದ್ದ ಕಾರಣ ನಾವು ಸುಳ್ಳು ಪ್ರಕರಣ ಮಾಡಿಸಿ ಸುಳ್ಳು ಸಾಕ್ಷಿ ಹೇಳಿದ್ದೇವೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-
(ಹೆಚ್. ದೇವರಾಜು)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ

ಸ್ಪೆಷಲ್ ಎಸ್ ಸಿ ಐಪಿಸಿ & ಎಸ್ ಸಿ/ಎಸ್ ಟಿ ನಂಃ 01/2019

ಫ್ರಾಸಾ:– 5 (ಚಾಸಾ :–6 )

ಪ್ರಮಾಣೀಕರಿಸಿದ ದಿನಾಂಕಃ–15. 03.2023

ಹೆಸರು :ವೆಂಕಟರವಣಪ್ಪ

ತಂದೆಯ ಹೆಸರು : ಕೃಷ್ಣಪ್ಪ

ವಯಸ್ಸು : 48 ವರ್ಷ

ಕೆಲಸ : ಗಾರೆ ಕೆಲಸ

ವಾಸ : ಮುಗಿಲಹಳ್ಳಿ, ಶ್ರೀನಿವಾಸಪುರ ತಾಲ್ಲೂಕು.

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ವೆಂಕಟೇಶಪ್ಪ, ಲಕ್ಷ್ಮಮ್ಮ, ನಾರಾಯಣಪ್ಪ, ಹರೀಶ್ ರವಿಕುಮಾರ ಗೊತ್ತಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಐದೂ ಜನ ಆರೋಪಿತರು ಗೊತ್ತಿರುತ್ತದೆ. ವೆಂಕಟೇಶಪ್ಪನವರ ಮಗ ಶ್ರೀನಾಥ ಗೊತ್ತಿರುತ್ತದೆ. ವೆಂಕಟೇಶಪ್ಪನ ಶ್ರೀನಾಥ ಸತ್ತು 3 ರಿಂದ 4 ವರ್ಷ ಆಗಿದೆ. ಅನಂತಪ್ಪ ನ ಮಗಳು ಅಖಿಲಾ ಎನ್ನುವವರು ಗೊತ್ತಿದೆ.

ಈಗ್ಗೆ 4 ವರ್ಷಗಳ ಹಿಂದೆ ಶ್ರೀನಾಥನು ಪ್ರೀತಿ ಪ್ರೇಮದ ವಿಚಾರದಲ್ಲಿ ಆತ ನೇಣು ಹಾಕಿಕೊಂಡು ಸತ್ತಿದ್ದ ಎಂದು ಗೊತ್ತಾಯಿತು. ಯಾರು ತೊಂದರೆ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರಿಂದ ಶ್ರೀನಾಥನಿಗೆ ಏನು ತೊಂದರೆ ಆಗಿದೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಆರೋಪಿತರ ವಿರುದ್ಧ ಯಾವುದೇ ಹೇಳಿಕೆ ಕೊಟ್ಟಿಲ್ಲ.

ಈಗ ನಾನು ನೋಡುತ್ತಿರುವ ಮುಮಾ 1 ರ ಹಗ್ಗ ಶ್ರೀನಾಥನು ನೇಣು ಹಾಕಿಕೊಂಡಿದ್ದು ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿಪಿ ರವರು ಅನುಮತಿ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಪಿಪಿ ರವರಿಂದ ಃ-**

ದಿನಾಂಕಃ 18-09-2018 ರಂದು ಸಂಜೆ ಸುಮಾರು 4.30 ಕ್ಕೆ ನಾನು ನನ್ನ ಮನೆ ಬಳಿ ಇದ್ದಾಗ ಎಲ್ಲಾ ಆರೋಪಿತರು ವೆಂಕಟೇಶಪ್ಪನ ಮನೆ ಹತ್ತಿರ ಬಂದು ಶ್ರೀನಾಥನ ಜೊತೆಯಲ್ಲಿ ಗಲಾಟೆ ಮಾಡಿದರು ಎನ್ನುವುದು ಗೊತ್ತಿಲ್ಲ.

ಆರೋಪಿತರು ಎಲ್ಲರೂ ಒಟ್ಟಾಗಿ ಬಂದು ಶ್ರೀನಾಥನನ್ನು ಏನೋ ಕೀಳು ಜಾತಿ ನನ್ನ ಮಗನೇ, ನಿನಗೆ ನಮ್ಮ ಹುಡುಗಿ ಬೇಕಾ, ನಮ್ಮ ಹುಡುಗಿಯನ್ನು ಪ್ರೀತಿಸುವ ಬಗ್ಗೆ ಎಲ್ಲಾ ಕಡೆ ಮಾತನಾಡುತ್ತಿದ್ದಾರಂತೆ ಎಂದು ಗಲಾಟೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ.

ನಮ್ಮ ಹುಡುಗಿಯ ತಂಟೆಗೆ ಬಂದರೆ ನಿನ್ನನ್ನು ನಿಮ್ಮ ಕುಟುಂಬದವರನ್ನು ಪ್ರಾಣ ಸಹಿತ ಬಿಡುವುದಿಲ್ಲ, ಎಂದು ಶ್ರೀನಾಥ ನನ್ನು ಬೈದರು ಎನ್ನುವುದು ಸರಿಯಲ್ಲ.

ಆ ರೀತಿ ಘಟನೆಯಾದ 8-10 ದಿನಕ್ಕೆ ಅಕಿಲಳನ್ನು ಬೇರೆ ಕಡೆ ಮದುವೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಆತ ಸಾಯುವ 2 ದಿನಗಳ ಹಿಂದೆ 1 ನೇ ಆರೋಪಿ ಹೊಸದಾಗಿ ಕಟ್ಟುತ್ತಿರುವ ನಾರಾಯಣಪ್ಪನ ಮನೆಯ ಬಳಿ ಬಂದು ಅಕಿಲಳನ್ನು ಶ್ರೀನಾಥ ಪುನಃ ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾನೆ ಎನ್ನುವುದು ಗೊತ್ತಿಲ್ಲ.

ದಿನಾಂಕ 26/09/2018ರಂದು ಸಂಜೆ 5.30 ಗಂಟೆಗೆ ಆರೋಪಿತರು ನಾರಾಂಯಣಪ್ಪನ ಮನೆಯ ಬಳಿ ಬಂದು ಶ್ರೀನಾಥನನ್ನು ಆರೋಪಿ ರಮೇಶ, ಏನೋ ಕೀಳು ಜಾತಿ ಮಾದಿಗ ನನ್ನ ಮಗನೇ, ನಿನಗೆ ನಮ್ಮ ಜಾತಿಯ ಹುಡುಗಿ ಬೇಕಾಗಿದ್ದಾಳಾ, ಇನ್ನೊಮ್ಮೆ ಆಕೆಯನ್ನು ಸಂಪರ್ಕಿಸಿದರೆ ನಿನ್ನನ್ನು ನಿನ್ನ ಕುಟುಂಬದವರನ್ನು ಕೊಲೆ ಮಾಡುತ್ತೇವೆ ನೀನೇ ಎಲ್ಲಾದರೂ ಹೋಗಿ ಸಾಯಿ, ಇಲ್ಲವಾದಲ್ಲಿ ನಿನ್ನ ಕುಟುಂಬವನ್ನು ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆರೋಪಿತರು ಜಾತಿ ನಿಂದನೆ ಮಾಡಿ, ಆತನಿಗೆ ಎಲ್ಲಾದರೂ ಹೋಗಿ ಸಾಯಿ ಎಂದು ಪ್ರಚೋದನೆ ಮಾಡಿದರು ಎಂದರೆ ಸರಿಯಲ್ಲ. ಶ್ರೀನಾಥನು ಬದುಕಿದ್ದು ಏನೂ ಪ್ರಯೋಜನ ಎಂದು ಅವಮಾನ ಪಟ್ಟುಕೊಂಡ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ.

ದಿನಾಂಕ 28/09/2018 ರಂದು ಶ್ರೀನಾಥನು ಮನೆಯಿಂದ ಹೋದವನು ವಾಪಸ್ಸು ಬರಲಿಲ್ಲ ಎಂದು ತಿಳಿಯಿತು ಎಂದರೆ ಗೊತ್ತಿಲ್ಲ. ಆರೋಪಿತರ ನೀಡಿದ ಅವಮಾನಕ್ಕೆ ತಾಳಲಾರದೆ ಶ್ರೀನಾಥನು ನೇಣು ಹಾಕಿಕೊಂಡು ಸತ್ತ ಎನ್ನುವುದು ಗೊತ್ತಿಲ್ಲ. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆಐ ಎಂದರೆ ಸರಿಯಲ್ಲ. ಸಾಕ್ಷಿಯ ಪೊಲೀಸ್ ಹೇಳಿಕೆಯನ್ನು ನಿ.ಪಿ.20 ಎಂದು ಗುರುತಿಸಲಾಯಿತು. ನಿ.ಪಿ.20 ರಲ್ಲಿ ಇರುವ ವಿಚಾರಳಗನ್ನು ನನಗೆ ಈಗ ಓದಿ ಹೇಳುತ್ತಿದ್ದು ಅದರಂತೆ ನಾನು ಪೊಲೀಸರಿಗೆ ಹೇಳಿಕೆ ನಿಡಿದ್ದೆ ಎಂದರೆ ಸರಿಯಲ್ಲ. ನನಗೆ ನೇಣು ಹಾಕಿಕೊಂಡು ವಿಚಾರ ಮಾತ್ರ ಗೊತ್ತು ಬೇರೆ ವಿಚಾರಗಳು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ ಃ**-ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-
**(ಹೆಚ್.ದೇವರಾಜು)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.